

ಕಗಿಸೊ ಚೆಂಡಿನ ಸೀಮ್ ಹಿಡಿಯುವ ಪರಿ

ಅತಿ ಹೆಚ್ಚು ವಿಕೆಟ್ ಪಡೆದ ಇಬ್ಬರು ಬೌಲರ್‌ಗಳಲ್ಲಿ ಕಗಿಸೊ ಕೂಡ ಒಬ್ಬರಾಗಿದ್ದರು. ಯುನೈಟೆಡ್ ಅರಬ್ ಎಮಿರೇಟ್ಸ್‌ನಿಂದ ತಂಡ ತವರಿಗೆ ಬಂದಮೇಲೆ ನ್ಯೂಲ್ಯಾಂಡ್ಸ್‌ನಲ್ಲಿ ಒಂದು ಸಮಾರಂಭ ನಿಗದಿಯಾಗಿತ್ತು. ಪ್ರೆಸ್ ಬಾಕ್ಸ್‌ನಲ್ಲಿ ಸುದ್ದಿಗೋಷ್ಠಿ. ಆ ತಂಡದ ನಾಯಕನಾಗಿದ್ದ ಐಡನ್ ಮರ್ಕ್ರಂ ಹಾಗೂ ತರಬೇತುದಾರ ರೇ ಜೆನ್ನಿಂಗ್ಸ್ ಸಂತಸದ ಕ್ಷಣಗಳನ್ನು ಹಂಚಿಕೊಳ್ಳುತ್ತಿದ್ದರೆ, ಇತರ ಆಟಗಾರರು ಸುತ್ತುವರಿದು ಕಣ್ಣರಳಿಸಿ ನಿಂತಿದ್ದರು. ಕೆಲವು ಸುದ್ದಿಮಿತ್ರರು, 'ಕಗಿಸೊ ರಬಾಡ ಎಲ್ಲಿ' ಎಂದು ಅತ್ತಿತ್ತ ನೋಡಿದಾಗ, ಕಿಟಕಿಯತ್ತ ನೋಟ ಬೀರಿ ಕಗಿಸೊ ನಿಂತಿದ್ದುದು ಗಮನಕ್ಕೆ ಬಂದಿತು. ಆಸ್ಟ್ರೇಲಿಯಾ ಎದುರು ದಕ್ಷಿಣ ಆಫ್ರಿಕಾ ಸೋಲುವ ಸ್ಥಿತಿಯಲ್ಲಿ ಇತ್ತು. ತನ್ನ ದೇಶದ ತಂಡ ಸೋಲಬಾರದು ಎಂಬಂತೆ ಪ್ರಾರ್ಥಿಸುತ್ತಾ ಆ ಆಟವನ್ನು ತನ್ಮಯನಾಗಿ ನೋಡುತ್ತಾ ನಿಂತುಬಿಟ್ಟಿದ್ದರು. ಯಾರೂ ಅವರ ಏಕಾಗ್ರತೆಗೆ ಭಂಗ ತರಲಿಲ್ಲ. ಇನ್ನೊಮ್ಮೆ ಸಂದರ್ಶನ ಮಾಡಿದರಾಯಿತು ಎಂದು ಸುಮ್ಮನಿದ್ದುಬಿಟ್ಟರು.

ಆ ದಿನ ಕಗಿಸೊ ಸಮಾರಂಭ ಮುಗಿಸಿ ಮನೆಗೆ ಹೋಗಿ ಸ್ವಲ್ಪ ಹೊತ್ತಾಗಿತ್ತಷ್ಟೆ. ಹೈವೆಲ್ಡ್ ಲಯನ್ಸ್ ತಂಡದ ಪರವಾಗಿ ಆಡಲು ಒಪ್ಪಂದದ ಆಹ್ವಾನ ಹುಡುಕಿಕೊಂಡು ಬಂತು. ಅಂತರರಾಷ್ಟ್ರೀಯ ಕ್ರಿಕೆಟ್ ಆಡಲು ಕೂಡ ಅನಂತರ ಹೆಚ್ಚು ಕಾಲ ಕಾಯಬೇಕಾಗಲಿಲ್ಲ.

2015ರ ವಿಶ್ವಕಪ್ ಕ್ರಿಕೆಟ್ ಸೆಮಿಫೈನಲ್‌ನಲ್ಲಿ ನ್ಯೂಜಿಲೆಂಡ್ ಎದುರು ದಕ್ಷಿಣ ಆಫ್ರಿಕಾ ಸೋತಮೇಲೆ ತಂಡದ ತಾಳಮೇಳ ತಪ್ಪಿತ್ತು. ಪೂರ್ತಿ ಫಿಟ್ ಆಗಿಲ್ಲದಿದ್ದರೂ ಆಡುವ ಅವಕಾಶ ಪಡೆದಿದ್ದ ಫಿಲ್ಯಾಂಡರ್ ಮುಖ ಬಾಡಿತ್ತು. ಮಿಸ್ಟರ್ 360 ಡಿಗ್ರಿ ಎಂದೇ ಹೆಸರಾಗಿದ್ದ ಎ.ಬಿ. ಡಿವಿಲಿಯರ್ಸ್ ತಮ್ಮ ಹೆಂಡತಿಗೆ ಮೊದಲ ಮಗು ಹುಟ್ಟಿದ ಮೇಲೆ ತಂಡವನ್ನು ಸರಿಪಡಿಸುವ ವಿಷಯಕ್ಕೆ ಬೆನ್ನುಮಾಡಿ, ಸುಮ್ಮನಾಗಿಬಿಟ್ಟಿದ್ದರು. ಆ ಸಂದರ್ಭದಲ್ಲೇ ಬಾಂಗ್ಲಾದೇಶದ ಎದುರು ಆಡುವ ಅವಕಾಶ ಕಗಿಸೊ ಅವರಿಗೆ ಸಿಕ್ಕಿದ್ದು.

ಮೊದಲ ಏಕದಿನ ಪಂದ್ಯದಲ್ಲಿ 16 ರನ್‌ಗಳಿಗೆ ಅವರು 6 ವಿಕೆಟ್ ಪಡೆದಾಗ ಜಗತ್ತಿನ ಕ್ರಿಕೆಟ್‌ಪ್ರೇಮಿಗಳು ಈ ಹುಡುಗನನ್ನು ಬೆರಗುಗಣ್ಣಿನಿಂದ ನೋಡಿದ್ದರು. ಆ ಇನಿಂಗ್ಸ್‌ನಲ್ಲಿ ಕಗಿಸೊ ಒಂದು ಹ್ಯಾಟ್ರಿಕ್ ಕೂಡ ಪಡೆದಿದ್ದರು. ಆ ಏಕದಿನ ಪಂದ್ಯಗಳ ಸರಣಿಯನ್ನು ಬಾಂಗ್ಲಾದೇಶ ಸೋತಿತು ಎನ್ನುವುದು ಬೇರೆ ಮಾತು. ಅದಾಗಿ ಕೆಲವೇ ತಿಂಗಳ ನಂತರ ಭಾರತದ ನೆಲದಲ್ಲಿ ಏಕದಿನ ಪಂದ್ಯಗಳನ್ನು ಆಡಿದ ತಂಡದಲ್ಲಿಯೂ ಕಗಿಸೊಗೆ ಅವಕಾಶ ಸಿಕ್ಕಿತು. ಆ ಸರಣಿಯಲ್ಲಿ ಡೇಲ್ ಸ್ಟೇನ್ ಜೊತೆಯಲ್ಲಿ ಅತಿ ಹೆಚ್ಚು ವಿಕೆಟ್ ಪಡೆದ ಸಾಧನೆಯನ್ನು ಈ ಬೌಲರ್ ಮಾಡಿದರು. ಚಕಚಕನೆ ಹೀಗೆ ಅವಕಾಶಗಳ ಏಣಿ ಏರುತ್ತಾ ಹೋಗಿ ಟೆಸ್ಟ್ ಕ್ರಿಕೆಟ್‌ನಲ್ಲಿ ವಿಶ್ವದ ನಂಬರ್ 1 ಆಟಗಾರ ಎಂದು 22ನೆಯ ವಯಸ್ಸಿನಲ್ಲೇ ಅನಿಸಿಕೊಂಡಿದ್ದು ಇನ್ನೊಂದು ಹೆಗ್ಗಳಿಕೆ. ಅವರು 20ನೇ ವಯಸ್ಸಿನಲ್ಲಿ ಭಾರತದ ಎದುರು ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದು. ಮಾರ್ನ್ ಮಾರ್ಕಲ್, ಸ್ಟೇನ್, ಫಿಲ್ಯಾಂಡರ್ ಎಲ್ಲರೂ ನೋವಿನಿಂದ ಬೇರೆ ಬೇರೆ ಘಟ್ಟಗಳಲ್ಲಿ ಆಡಲು ಆಗದೇ ಹೊರಗುಳಿದಿದ್ದ ಸರಣಿ ಅದು. ದಕ್ಷಿಣ ಆಫ್ರಿಕಾ ಸೋತು ಸುಣ್ಣವಾಯಿತು. ಹಾಗಿದ್ದೂ ಕಗಿಸೊಗೆ ಎದೆ ಬೆಚ್ಚಗಾಯಿತು. ಯಾಕೆಂದರೆ, ಟೆಸ್ಟ್ ಕ್ರಿಕೆಟ್‌ನ ಹಲವು ಪಾಠಗಳು ಆಗ ಮನದಟ್ಟಾದವು. ಇಂಗ್ಲೆಂಡ್ ವಿರುದ್ಧದ ಸರಣಿಯ ಕೊನೆಯ ಟೆಸ್ಟ್‌ನಲ್ಲಿ 144 ರನ್ ನೀಡಿ 13 ವಿಕೆಟ್‌ಗಳನ್ನು ಪಡೆದಾಗ ವಯಸ್ಸಿನ್ನೂ ಇಪ್ಪತ್ತೊಂದು ದಾಟಿರಲಿಲ್ಲ. ಸರಣಿ ಸೋತ ನಂತರದ ಸ್ಥಿತಿಯಲ್ಲಿ, ಕೊನೆಯ ಪಂದ್ಯದಲ್ಲಿ ಹತ್ತು ವಿಕೆಟ್‌ಗೂ ಹೆಚ್ಚಿನದ್ದನ್ನು ತನ್ನದಾಗಿಸಿಕೊಂಡ ಹಸಿವು ಅವರ ಕೌಶಲಕ್ಕೆ ಸಾಕ್ಷಿ.

ಕಗಿಸೊ ವಿಶ್ವದರ್ಜೆಯ ವೇಗದ ಬೌಲರ್. ಹೀಗಾಗಿ ಏಕದಿನ, ಟ್ವೆಂಟಿ20 ಪಂದ್ಯಗಳ ಒತ್ತಡದ ನೊಗಕ್ಕೆ ಭುಜ ಕೊಡುತ್ತಲೇ ಬಂದರು. 60 ಟೆಸ್ಟ್, 101 ಏಕದಿನ ಪಂದ್ಯಗಳು, 56 ಟ್ವೆಂಟಿ20 ಅಂತರರಾಷ್ಟ್ರೀಯ ಪಂದ್ಯಗಳು, ಅವಲ್ಲದೆ ಇಂಡಿಯನ್ ಪ್ರೀಮಿಯರ್ ಲೀಗ್‌ನಂತಹ ಟೂರ್ನಿಗಳಲ್ಲೂ ಈ ಹುಡುಗ ಆಡಿದರು. ಗಾಯ, ನೋವನ್ನು ಮೀರಿ ಪ್ರತಿ ಗಂಟೆಗೆ 145–150 ಕಿ.ಮೀ. ವೇಗದಲ್ಲಿ ಬೌಲಿಂಗ್ ಮಾಡಬಲ್ಲ ಕ್ಷಮತೆ ಉಳಿಸಿಕೊಂಡರು.

ಭಾರತದ ಎದುರಿನ ಸರಣಿ ಶುರುವಾಗುವ ಮೊದಲು ಟೆಸ್ಟ್‌ನಲ್ಲಿ 280 ವಿಕೆಟ್‌ಗಳು ಅವರ ಖಾತೆಗೆ ಸಂದಿದ್ದರೆ, ಏಕದಿನ ಪಂದ್ಯಗಳಲ್ಲಿ 157 ವಿಕೆಟ್‌ಗಳು ಬುಟ್ಟಿಗೆ ಬಿದ್ದಿವೆ. ಚುಟುಕು ಕ್ರಿಕೆಟ್‌ನಲ್ಲಿ ಗಮನಸೆಳೆದಿದ್ದರೂ ಕೆಂಪು ಚೆಂಡಿನಲ್ಲಿ ಅವರು ಎಂತಹ ಕರಾಮತ್ತು ತೋರಬಲ್ಲರು ಎನ್ನುವುದನ್ನು ಭಾರತದ ಎದುರಿನ ಮೊದಲ ಟೆಸ್ಟ್ ಪಂದ್ಯದಲ್ಲೇ ಪ್ರದರ್ಶಿಸಿದ್ದಾರೆ. ಬಾಲ್ಯದಲ್ಲಿ ಅವರ ಮೇಷ್ಟರು ಸ್ಮಿತ್, 'ವಾಂಟ್ ಯೂ ಟು ಟ್ರೈ ಕ್ರಿಕೆಟ್' ಎನ್ನದೇ ಹೋಗಿದ್ದಿದ್ದರೆ ಇಷ್ಟೆಲ್ಲ ಆಗುತ್ತಲೇ ಇರಲಿಲ್ಲ.

ಪ್ರತಿಕ್ರಿಯಿಸಿ: feedback@sudha.co.in